ಇ) ಕೂಡಲೇ ಇಂತಹ ಅಧಿಕಾರಿಗಳ ಮೇಲೆ ಕ್ರಮ ಕೈಗೊಂಡು ನೇರವಾಗಿ ಪುರಸಭೆಯ ಪಂಪ್‌ಹೌಸ್‌ಗೆ ಮಾತ್ರ ಈ ಜೋಡಣೆ ನೀಡಿ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಮಡಲಾಗುವುದೇ?

ಶ್ರೀ ಬಸವರಾಜ ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ಹೌದು. ಬಂದಿದೆ.

ಆ) ಈ ಎಕ್ಸ್‌ಪ್ರೆಸ್ ಲೈನಿನ ಮೇಲೆ ಸೇಡಂ ಪುರಸಭೆಯ ಹಾಗೂ ವಾಸವದತ್ತ ಸೀಮೆಂಟ್ ಕಂಪನಿಗೆ ಸಂಬಂಧಿಸಿದ ಒಟ್ಟು ಎರಡು ನೀರು ಸರಬರಾಜು ಸ್ಥಾವರಗಳು ಮಾತ್ರ ಇದ್ದು, ಇವುಗಳ ಒಟ್ಟು ಸಾಮರ್ಥ್ಯವು ಕೇವಲ 205 ಹೆಚ್.ಪಿ.ಗಳು ಮಾತ್ರ ಆಗಿರುವುದರಿಂದ, ಈ ಎಕ್ಸ್‌ಪ್ರೆಸ್ ಲೈನ್ ಓವರ್ ಲೋಡ್ ಆಗುವ ಸಂದರ್ಭವಿರುವುದಿಲ್ಲ.

ಇ) ವಾಸವದತ್ತ ಸಿಮೆಂಟ್ ಕಾರ್ಖಾನೆಯ ನೀರು ಸರಬರಾಜು ಸ್ಥಾವರಕ್ಕೆ ವಿದ್ಯುತ್ ಸರಬರಾಜು ಮಾಡುತ್ತಿರುವ 11 ಕೆ.ವಿ. ಫೀಡರ್ ನಲ್ಲಿಯೇ 1 ಕೊ.ಮೀನಷ್ಟು ಲೈನ್‌ನ್ನು ಮಾತ್ರ ಉಪಯೋಗಿಸಿಕೊಂಡು, 6 ಕಿ.ಮೀ ನಷ್ಟು ಹೊಸ ಲೈನನ್ನು ನಿರ್ಮಿಸಿ, ಎಕ್ಸ್‌ಪ್ರೆಸ್ ಲೈನಿನ ನಿರ್ಮಾಣವು ತಾಂತ್ರಿಕ ಹಾಗೂ ಆರ್ಥಿಕ ದೃಷ್ಟಿಯಿಂದ ಉತ್ತಮವೆಂದು ಕಂಡು ಬಂದ ನಂತರವೇ, ಕಾಮಗಾರಿಯನ್ನು ಕೈಗೊಂಡಿರುವುದರಿಂದ ಯವ ಅಧಿಕಾರಿಯ ಮೇಲೆ ಕ್ರಮ ಕೈಗೊಳ್ಳುವ ಪ್ರಮೇಯವಿರುವುದಿಲ್ಲ ಈ ಎರಡೂ ನೀರು ಸರಬರಾಜು ಸ್ಥಾವರಗಳ ಒಟ್ಟು ಸಾಮರ್ಥ್ಯವು 205 ಹೆಚ್.ಪಿ. ಮಾತ್ರ ಆಗಿರುವುದರಿಂದ, ಮೇಲ್ಕಂಡ 11 ಕೆ.ವಿ. ಎಕ್ಸ್‌ಪ್ರೆಸ್ ಲೈನನ್ನು ಓವರ್ ಲೋಡ್ ಆಗುವ ಪ್ರಶ್ನೆಯೂ ಉದ್ಭವಿಸುವುದಿಲ್ಲ.

ಬಿಜಾಪುರ ಜಿಲ್ಲೆಗೆ ನೀರಾವರಿ ಯೋಜನೆಗೆ ಬಿಡುಗಡೆ ಮಾಡಿರುವ ಹಣ

3919 (4296) : ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪ್ರಸಕ್ತ ಹಣಕಾಸು ವರ್ಷದಲ್ಲಿ ಬಿಜಾಪುರ ಜಿಲ್ಲೆಗೆ ಹನಿ ನೀರಾವರಿ ಯೋಜನೆಗಾಗಿ ಬಿಡುಗಡೆ ಮಾಡಿದ ಹಣ ಎಷ್ಟು;

ಆ) ಜಿಲ್ಲೆಗೆ ಹಂಚಿಕೆ ಮಾಡಿದ್ದ ಹಣ ಎಷ್ಟು; ಈವರೆಗೆ ಮಾಡಿರುವ ವೆಚ್ಚ ಎಷ್ಟು; (ವಿವರಗಳನ್ನು ತಾಲ್ಲೂಕುವಾರು ನೀಡುವುದು)

ಇ) ಹನಿ ನೀರಾವರಿ ಯೋಜನೆಯಡಿ ಎಷ್ಟು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ?

ಶ್ರೀ ಪಿ.ಕೆ. ಶಿವಣ್ಣ (ತೋಟಗಾರಿಕೆ ಸಚಿವರು)

ಅ) ರೂ. 50 ಲಕ್ಷ

ಆ) ಜಿಲ್ಲೆಗೆ 50 ಲಕ್ಷ ಹಂಚಿಕೆ ಆಗಿದ್ದು ರೂ. 22.25 ಲಕ್ಷ ವೆಚ್ಚವಾಗಿದೆ. ತಾಲ್ಲೂಕುವಾರು ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

ತಾಲ್ಲೂಕು	ಬಿಡುಗಡೆಯಾದ ಅನುದಾನ (ರೂ. ಲಕ್ಷ)	ಖರ್ಚಾದ ಹಣ (ರೂ. ಲಕ್ಷಗಳಲ್ಲಿ)
ಬಿಜಾಪುರ	25.00	7.00
ಇಂಡಿ	15.50	8.23
ಸಿಂದಗಿ	2.50	1.47

1	2	3
ಬಾಗೇವಾಡಿ	6.00	5.10
ಮುದ್ದೇಬಿಹಾಲ್	1.00	0.45
ಒಟ್ಟು	**50.00**	**22.25**

ಇ) ಈ ಯೋಜನೆಯಡಿ 299 ಫಲಾನುಭವಿಗಳ ತಾಕಿನಲ್ಲಿ 362 ಹೆಕ್ಟೇರ್ ವಿಸ್ತೀರ್ಣದಲ್ಲಿ ಹನಿ ನೀರಾವರಿ ಕಾಮಗಾರಿ ಕೆಲಸಗಳನ್ನು ಅಳವಡಿಸಲಾಗಿದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಖಾಸಗಿ ಬಸ್ಸುಗಳನ್ನು ಗುತ್ತಿಗೆಗೆ ಪಡೆದಿರುವುದು

3943 (4294) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಖಾಸಗಿ ಬಸ್ಸುಗಳನ್ನು ಗುತ್ತಿಗೆಗೆ ಪಡೆದುಕೊಳ್ಳಲಾಗುತ್ತಿದೆಯೆ;

ಆ) ಹಾಗಿದ್ದರೆ ಎಷ್ಟು ಬಸ್ಸುಗಳನ್ನು ಗುತ್ತಿಗೆಗೆ ಪಡೆದುಕೊಳ್ಳಲಾಗಿದೆ; (ಸಂಸ್ಥೆ ವಾರು ವಿವರ ನೀಡುವುದು)

ಇ) ಈ ಬಸ್ಸುಗಳ ಮಾಲೀಕರ ಹೆಸರು ಬಸ್ಸುಗಳ ಸಂಖ್ಯೆಯನ್ನು ತಿಳಿಸುವುದು;

ಈ) ಈ ಖಾಸಗಿ ಬಸ್ಸುಗಳು ಪ್ರತಿದಿನ ಎಷ್ಟು ಕಿಲೋಮೀಟರ್ ಕ್ರಮಿಸಬೇಕಾಗುತ್ತದೆ; ಪ್ರತಿ ಕಿಲೋಮೀಟರ್‌ಗೆ ನೀಡುತ್ತಿರುವ ಹಣ ಎಷ್ಟು;

ಉ) ಈ ಗುತ್ತಿಗೆಯಲ್ಲಿ ಅವ್ಯವಹಾರ ನಡೆಯುತ್ತಿರುವುದು ನಿಜವೆ;

ಊ) ಹಾಗಿದ್ದಲ್ಲಿ ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಬಿ. ರಮಾನಾಥ್ ರೈ (ಸಾರಿಗೆ ಸಚಿವರು)

ಅ) ಹೌದು.

ಆ) ಕ.ರಾ.ರ.ಸಾ.ಸಂ. 260
ಬೆಂ.ಮ.ಸಾ.ಸಂ. 643
ಈ.ಕ.ರ.ಸಾ.ಸಂ. 639
ವಾ.ಕ.ರ.ಸಾ.ಸಂ. 63
ಒಟ್ಟು **1605**

ಇ) ಅನುಬಂಧ–ಅ ನಲ್ಲಿ ವಿವರವನ್ನು ಒದಗಿಸಲಾಗಿದೆ.

ಈ) ಸದರಿ ಬಸ್ಸು ಒಂದು ದಿನಕ್ಕೆ 250 ಕಿ.ಮೀ ಕಾರ್ಯಾಚರಣೆ ಮಾಡಿದರೆ ಪ್ರತಿ ಕಿ.ಮೀ. ದರವು ಕೆಳಕಂಡಂತಿರುತ್ತದೆ;

ಸಾರಿಗೆ ಸಂಸ್ಥೆಗಳು:

ಬಸ್ಸಿನ ವರ್ಗ	ಪ್ರತಿ ಕಿ.ಮೀ.ದರ**
ವೇಗದೂತ	ರೂ. 8.71
ಅಲ್ಟ್ರಾ ಡೀಲಕ್ಸ್	ರೂ. 9.78
ನಗರ	ರೂ. 8.96